ಹಂದಿ. ಒಂದಷ್ಟು ದಿನ ನಾಡಿನಲ್ಲಿ ಬೆಳೆದಿದ್ದರಿಂದ, ನನ್ನ ಒಡೆಯ ಚೆನ್ನಾಗಿ ಮೇವು ಹಾಕಿದ್ದರಿಂದ ಹೀಗೆ ದಷ್ಟಪುಷ್ಟವಾಗಿ ಬೆಳೆದಿದ್ದೇನೆ, ಅಷ್ಟೆ' ಎಂದು ಹೇಳಿ ಅವುಗಳ ಸ್ನೇಹ ಸಂಪಾದನೆ ಮಾಡಿತು.

ತಿನ್ನಲು ಒಳ್ಳೊಳ್ಳೆಯ ಗಡ್ಡೆ ಗೆಣಸು ಸಿಗುತ್ತಿದ್ದುದರಿಂದ ದುಗ್ಗನ ಹಂದಿಗೆ ಸಂತೋಷವೇ ಆಯಿತು. ಆದರೆ, ಉಳಿದ ಹಂದಿಗಳು ಮಾತ್ರ ತುಂಬಾ ಬಡಕಲಾಗಿದ್ದವು. 'ಅಲ್ಲಾ ಇಲ್ಲಿ ಇಷ್ಟೊಂದು ಒಳ್ಳೆಯ ಗಡ್ಡೆ ಗೆಣಸು ತಿನ್ನಲು ಸಿಗುತ್ತದೆ. ಆದರೂ ನೀವೇಲ್ಲಾ ಇಷ್ಟೊಂದು ಬಡಕಲಾಗಿ ಯಾಕಿದ್ದೀರಾ?' ಎಂದಿತು. ಆಗ ಕಾಡಿನ ಹಂದಿಗಳು, 'ನೋಡು ನೀನು ನಾಡಿನಲ್ಲಿ ಇದ್ದವನು. ಕಾಡಿನ ಸಮಾಚಾರ ನಿನಗೆ ಗೊತ್ತಿಲ್ಲ. ಇಲ್ಲಿ ಒಂದು ಠಕ್ಕನರಿ ಮತ್ತು ಮುದಿ ಹುಲಿ ಸೇರಿಕೊಂಡಿವೆ. ಎರಡೂ ಸೇರಿ ನಮ್ಮ ಕುಲವನ್ನು ನಾಶ ಮಾಡುತ್ತಿವೆ. ಹುಲಿ ಬಂದು ದೊಡ್ಡ ಹಂದಿ ಹಿಡಿದರೆ, ನರಿ ಬಂದಾಗ ಮರಿಗಳನ್ನು ಹಿಡಿಯುತ್ತದೆ. ಇಂದೂ ಕೂಡ, ನೀನು ಬರುವ ಮೊದಲು ಹುಲಿ ದೊಡ್ಡ ಹಂದಿಯನ್ನು ಹೊತ್ತೊಯ್ಯಿತು. ಅವುಗಳ ಭಯದಿಂದಲೇ ನಾವೆಲ್ಲಾ ಹೀಗಾಗಿ ಹೋಗಿದ್ದೇವೆ' ಎಂದವು. ದುಗ್ಗನ ಹಂದಿಗೆ ತನ್ನ ಅವ್ವನನ್ನು ಹುಲಿಯೊಂದು ಕೊಂದು ಹಾಕಿದ್ದರ ನೆನಪಾಯಿತು. ಇದು ಅದೇ ಹುಲಿಯಿದ್ದಿರಬಹುದು. 'ಏನಾದರೂ ಮಾಡಿ ಆ ಹುಲಿಯನ್ನು ಕೊಂದುಹಾಕಿ, ತನ್ನ ಕುಲಬಾಂಧವರನ್ನು ರಕ್ಷಿಸಬೇಕು' ಅನ್ನಿಸಿತು. 'ಆ ನರಿ ಬಂದಾಗ ನೀವೆಲ್ಲಾ ನಾನು ಮಾಡಿದಂತೆ ಮಾಡಿ. ಅವುಗಳಿಂದ ನಿಮಗೆ ಮುಕ್ತಿ ಕೊಡಿಸುತ್ತೇನೆ' ಎಂದು ಹೇಳಿತು.

ಮಾರನೆಯ ದಿನ ನರಿ ಹೊಂಚು ಹಾಕುತ್ತಾ ಬಂತು. ಆಗ ದುಗ್ಗನ ಹಂದಿ ನರಿಯೆಡೆಗೆ ಮುಖ ತಿರುಗಿಸಿ 'ಬುಡ್‌ಬುಡರ್... ಬುಡ್‌ಬುಡರ್...' ಎಂದು ಜೋರಾಗಿ ಹೂಸು ಕೊಡಲಾರಂಭಿಸಿತು. ತಕ್ಷಣ ಎಲ್ಲಾ ಹಂದಿಗಳು ಸೇರಿಕೊಂಡು ಒಟ್ಟಿಗೆ ಜೋರಾಗಿ ಸದ್ದು ಮಾಡುತ್ತಾ ಹೂಸು ಕೊಡಲಾರಂಭಿಸಿದವು. ನರಿಗೆ ಆ ಶಬ್ದವನ್ನು, ದುರ್ವಾಸನೆಯನ್ನು ಸಹಿಸಲಾಗದೆ ತಲೆ ಸುತ್ತಿ ಬಂದಂತಾಯಿತು. 'ಇಲ್ಲಿಯೇ ಬಿದ್ದರೆ ಇವು ನನ್ನನ್ನು ಕೊಂದು ಹಾಕುತ್ತವೆ' ಎಂದು ಹೇಗೋ ಕಷ್ಟಪಟ್ಟು ತನ್ನ ಸ್ನೇಹಿತ ಹುಲಿಯಿದ್ದೆಡೆಗೆ ಓಡಿತು. ನರಿಯ ಅಯೋಮಯ ಸ್ಥಿತಿಯನ್ನು ಕಂಡ ಹುಲಿ 'ಏಕೆ? ಏನಾಯಿತು? ಹಂದಿ ಮರಿ ಸಿಗಲಿಲ್ಲವೆ?' ಎಂದು ವಿಚಾರಿಸಿಕೊಂಡಿತು. ನರಿ ನಡೆದಿದ್ದೆಲ್ಲವನ್ನೂ ಹೇಳಿ 'ಹೂಸು ಕೊಡುವುದರಲ್ಲಿ ನಾವೇ ಬಲಿಷ್ಠರು ಎಂದುಕೊಂಡಿದ್ದೆ ಹುಲಿಯಣ್ಣ. ಆದರೆ ನನ್ನ ಜೀವಮಾನದಲ್ಲೇ ಎಂದೂ ಕಂಡರಿಯದ ಭಯಂಕರ ಶಬ್ದದ, ದುರ್ವಾಸನೆಯ ಹೂಸು ನನ್ನನ್ನು ಕಂಗೆಡಿಸಿತು' ಎಂದಿತು.

'ಹಂದಿಗಳಿಗೆ ಅಷ್ಟೊಂದು ಧೈರ್ಯ ಹೇಗೆ ಬಂತು?' ಎಂದು ಹುಲಿ ಯೋಚಿಸತೊಡಗಿತು. 'ಅಲ್ಲೇನಾದರು ಹೊಸ ಹಂದಿ ಬಂದು ಸೇರಿಕೊಂಡಿದೆಯೆ?' ಎಂದಿತು. ನರಿ 'ಹೌದು ಹೌದು. ಒಂದು ಚಿಕ್ಕ ಗುಡ್ಡದ ಗಾತ್ರದ ಭಯಂಕರ ಹಂದಿಯೇ ಬಂದು ಸೇರಿಕೊಂಡಿದೆ. ಅದರ ಕೋರೆ ಹಲ್ಲುಗಳನ್ನು ಕಂಡೇ ನಾನು ಅರ್ಧ ಸತ್ತುಹೋಗಿದ್ದೆ' ಎಂದಿತು. ಆಗ ಹುಲಿ ಉತ್ಸಾಹದಿಂದ, 'ಅಯ್ಯೋ ಮಂಕೆ, ಹಂದಿ ಎಷ್ಟೇ ದೊಡ್ಡದಿದ್ದರೂ ಹಂದಿಯೆ. ಈ ಬಡಕಲು ಹಂದಿಗಳ ಚಕ್ಕಳ ತಿಂದು ತಿಂದೂ ನನಗೂ ಬೇಜಾರಾಗಿ ಹೋಗಿದೆ. ಬಾ. ಇಂದು ಪುಷ್ಕಳವಾದ ಹಂದಿಯನ್ನು ಕೊಂದು ತಿನ್ನೋಣ' ಎಂದಿತು. ನರಿಗೆ ಭಯವಾದರೂ ಹುಲಿಯ ಧೈರ್ಯದಿಂದ ಅದನ್ನು ಹಿಂಬಾಲಿಸಿತು.

ಹುಲಿ, ಅದರ ಹಿಂದೆ ನರಿ ಬರುತ್ತಿರುವುದನ್ನು ದೂರದಿಂದಲೇ ಗಮನಿಸಿದ ದುಗ್ಗನ ಹಂದಿ